**ಸಿ.ಸಿ.ನಂ.**: 29/2023

ಪಿ.ಡಬ್ಲ್ಯೂ:1

(ಇಂದು ದಿನಾಂಕಃ 24-08-**2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು –ಆರೋಪಿ ಪರ ಶ್ರೀಮತಿ ಎಸ್.ಡಿ.ಎನ್. ವಕೀಲರಿಂದ**

ನಾನು ನ್ಯಾಯಾಲಯಕ್ಕೆ ಸಾಲದ ಖಾತೆಯ ಉತಾರನ್ನು ಹಾಜರುಪಡಿಸಿರುತ್ತೇನೆ. ನಿಪಿ.11ರಲ್ಲಿ ಆರೊಪಿತನುನ ನಮಗೆ 2,84,693/- ನೀಡಲು ಬಾಕಿ ಇದೆ ಎಂಬ ಬಗ್ಗೆ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಆರೊಪಿತನು ಸಾಲವನ್ನು ಪಡೆದುಕೊಂಡಂನಂತರದಲಲ್ಲಿ 1,70,000/- ಹಣವನ್ನು ಭರಣ ಮಾಡಿರುತ್ತಾನೆ. ನಾನು ಈ ಹಿಂದಿನ ದಿನಾಂಕದಲ್ಲಿ 1,71,000/- ಎಂದು ಹೇಳಿದ್ದು ಈ ದಿನ 1,70,000/- ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ಸಾಲವನ್ನು ಪಡದುಕೊಂಡಂಹಣವನ್ನು ನಮ್ಮ ಫಿರ್ಯಾದಿ ಸಂಸ್ಥೆಗೆ ಭರಣ ಮಾಡಿರುತ್ತಾನೆ ಎಂದರೆ ಸರಿಯಲ್ಲ. ನಿಪಿ.2ರ ಮೇಲಿನ ಬರಣಿಗೆಯು ಆರೊಪಿತನದಲ್ಲ ಎಂದರೆ ಸರಿಯಲ್ಲ. ನಿಪಿ.2 ರಬರಣಿಗೆ ಹಾಗೂ ನಿಪಿ.2(ಎ) ಯಲ್ಲಿನ ಬರವಣಿಗೆ ಶಾಹಿಯಲ್ಲಿ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ಆರೊಪಿತನು ನಿಪಿ.2ನ್ನು ಬರೆದು ನೀಡಲಿಲ್ಲ ಎಂದರೆ ಸರಿಯಲ್ಲ. ನಿಪಿ.2ರ ಬರವಣಿಯನ್ನು ನಮ್ಮ ಫಿರ್ಯಾದಿ ಸಂಸ್ಥೆಯಿಂದ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೊಪಿತನು ವರ್ಗಾವಣೆಯ ಲಿಖಿತ ಅಧಿನಿಯಮದಡಿಯಲ್ಲಿ ಯಾವುದೇ ಅಪರಾಧವನ್ನು ಮಾಡನಿಲಿಲ್ಲ ಎಂದರೆ ಸರಿಯಲ್ಲ.

**ಸಿ.ಸಿ.ನಂ.**: 29/2023

ಪಿ.ಡಬ್ಲ್ಯೂ:1

ಆರೋಪಿತನು ಸಾಲವನ್ನು ಈಗಾಗಲೇ ಮರು ಪಾವತಿ ಮಾಡಿದ್ದರೂ ಕೂಡ ಆತನಿಂದ ಹೆಚ್ಚಿನ ಹಣವನ್ನು ಪಡೆಯುವ ಉದ್ದೇಶದಿಂದ ಈ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ.11ರಲ್ಲಿ ಆರೊಪಿತನು ನಮಗೆ ನೀಡಲು ಬಾಕಿ ಇರುವ ಹಣವು ನಮೂದು ಇಲ್ಲದೇ ಇದ್ದರೂ ಕೂಡ ಹೆಚ್ಚಿನ ಹಣವನ್ನು ಪಡಯುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.2ರಲ್ಲಿ ನೊಟಿಸಿಗೆ ಸಬಂಧಿಸಿದಂತೆ ಹಾಗೂ ಇತರೆ ಖರ್ಚು ವೆಚ್ಚಗಳನ್ನು ಸೇರಿಸಿ ಆರೊಪಿತನು ಬರೆದುಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ಆರೊಪಿತನು ನಮಗೆ ಈ ರೀತಿಯಾಗಿ ಬರೆದುಕೊಡದೇ ಇದ್ದರೂ ಸಹ ಬರೆದುಕೊಟ್ಟಿದ್ದಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ

ಪ್ರ.ದ.ನ್ಯಾ.ದಂ. ಕುಮಟಾ